ಒಂದಾಣೆ ಮಾಲೆ 261

ಇಚ್ಛಾಮರಣಿ

(ಪೌರಾಣಿಕ ಏಕಾಂಕ ನಾಟಕ)

*

ರಚಯಿತರು:
"ವಿಚಿತ್ರ," ಐತಡ್ಕ.

*

1959

ಬೆಲೆ: ೧ ಆಣೆ.

ಒಂದಾಣೆ ಮಾಲೆ — ಮಂಗಳೂರು.

ಭೀಷ್ಮ ಪ್ರತಿಜ್ಞೆ

[ಏಕಾಂಕ ನಾಟಕ]

ಪಾತ್ರಗಳು: ○ ಶಂತನು ○ ಮಂತ್ರಿ ○ ಸತ್ಯವ್ರತ ○ ಸತ್ಯವತಿ ○ ದೇವವ್ರತ ಅಥವಾ ಭೀಷ್ಮ.

ದೃಶ್ಯ ಒಂದು.

ಶಂತನು: ಬೇಟೆಯಾಡುವುದಕ್ಕಾಗಿ ವನಾಂತರಕ್ಕೆ ಬಂದ ನಾವು ಅಲೆದಾಡಿ ತುಂಬಾ ದಣಿದಿದ್ದೇವೆ. ಒಂದಿಷ್ಟು ಹೊತ್ತು ವಿಶ್ರಾಂತಿಯನ್ನು ಮಾಡದೆ, ಮುಂದುವರಿಯುವುದು ಅಸಾಧ್ಯವಾಗಿದೆ. ಮಂತ್ರಿವರ್ಯರೇ, ಅದಕ್ಕಾಗಿ ಪ್ರಶಸ್ತವಾದ ಒಂದು ಜಾಗವನ್ನು ತೋರಿಸೋಣಾಗಲಿ.

ಮಂತ್ರಿ: (ಕೈಮುಗಿದು) ಪ್ರಭೋ, ಇದೇ ಯೋಗ್ಯವಾದ ಸ್ಥಳ. ಸನಿಹದಲ್ಲೇ ಪರಮಪಾವನೆಯಾದ ಗಂಗಾಮಾತೆ—ಮಂಜುಳ ನಿನಾದದಿಂದೊಡಗೂಡಿ ಪ್ರವಹಿಸುತ್ತಾಳೆ. ಹದವಾಗಿ ಬೀಸುತ್ತಿರುವ ಗಾಳಿ ಆಹ್ಲಾದಕರವಾಗಿದೆ. ಫಲಭರಿತವಾಗಿ, ಬಾಗಿ ಬಳಕುತ್ತಿರುವ ಗಿಡಮರಗಳ ನಿಬಿಡತೆಯಿಂದ ಇಲ್ಲಿ ಸದಾ ನೆರಳು ಹರಡಿಕೊಂಡಿದೆ. ಶುಕ-ಪಿಕಗಳೇ ಮೊದಲಾದ ಪಕ್ಷಿಸಂಕುಲಗಳ ಗಾನವಾಹಿನಿಯಿಂದ ಈ ಸ್ಥಳ ಪುನೀತವಾಗಿದೆ. ಅಲ್ಲವೇ, ಪ್ರಭೂ?

ಶಂತ: ನಿಜವನ್ನೇ ಹೇಳಿದಿರಿ ಮಂತ್ರಿಗಳೇ. ನಮ್ಮ ಅನುಚರರಿಗೆಲ್ಲ ಈ ವಾರ್ತೆಯನ್ನು ತಿಳಿಸಿರಿ. ಅವರವರ ಮನಸ್ಸಿಗೊಪ್ಪುವಂತೆ ಎಲ್ಲರೂ ಸ್ವಚ್ಛಂದವಾಗಿ ವಿಶ್ರಾಂತಿಯನ್ನೈದಲಿ.

ಮಂತ್ರಿ: ಪ್ರಭೂ, ತಮ್ಮಾಜ್ಞೆ.

(ಪರಿವಾರದವರೆಲ್ಲ ಮನಬಂದಂತೆ ವಿಹರಿಸುತ್ತಿರುವರು. ಶಂತನು ಚಕ್ರವರ್ತಿ ಮಂತ್ರಿಯೊಡನೆ ಸಂಭಾಷಿಸುತ್ತಾ—)

ಶಂತನು: ಬನ್ನಿ ಮಂತ್ರಿಗಳೇ, ಈ ಗಂಗಾತೀರದ ಸೊಬಗನ್ನು ಒಂದು ಬಾರಿ ಮನದಣಿಯೆ ಸವಿಯೋಣ!

ಮಂತ್ರಿ: ಪ್ರಭೂ, ತಮ್ಮಿಚ್ಛೆಯಂತೆ. ಅದರಲ್ಲೂ ಸ್ವಚ್ಛವಾಗಿ ಕಂಗೊಳಿಸುತ್ತಿರುವ ಗಂಗಾಜಲದಲ್ಲಿ ಒಮ್ಮೆ ಕೈಕಾಲು ಮುಖಗಳನ್ನು ತೊಳೆದುಕೊಂಡರೆ ಎಂತಹ ಆಯಾಸವೂ ಪರಿಹಾರವಾಗುವುದರಲ್ಲಿ ಸಂದೇಹವಿಲ್ಲ

ಶಂತನು: (ಗಂಗೆಯಲ್ಲಿಳಿಯುತ್ತಾ) ಅದೇನು? ಮಂತ್ರಿಗಳೇ, ದೂರದಲ್ಲಿ ಒಂದು ನಾವೆ ಕಾಣಿಸುತ್ತಿದೆಯಲ್ಲಾ?

ಮಂತ್ರಿ: ಹೌದು, ಅದು ಈಚೆಯ ದಡಕ್ಕೆ ವೇಗವಾಗಿ ಬರುವಂತಿದೆ.

ಶಂತನು: ನಿಜ, ಅದನ್ನು ನಡೆಸುತ್ತಿರುವವಳು ಓರ್ವ ಯುವತಿಯಂತೆ ತೋರುತ್ತದೆ. ಅಲ್ಲವೆ?

ಮಂತ್ರಿ: ನಿಜ, ಚಕ್ರವರ್ತಿಗಳೇ. ಗಂಗಾತೀರದಲ್ಲಿ ಇಂತಹ ದೋಣಿ ನಡೆಸುತ್ತಿರುವ ನೂರಾರು ಕುಟುಂಬಗಳಿವೆ.

ಶಂತನು: (ಆಶ್ಚರ್ಯದಿಂದ) ಮಂತ್ರಿಶೇಖರ, ನೋಡು, ಆಕೆಯ ಸೌಂದರ್ಯವನ್ನು. ಹಾ! ಎಂತಹ ಚೆಲುವೆ!

ಮಂತ್ರಿ: ನಿಜವಾಗಿಯೂ ಇಂತಹ ಸುಂದರಿಯನ್ನು ನಾನೆಲ್ಲೂ ನೋಡಿಲ್ಲ, ಪ್ರಭೂ.

ಶಂತನು: ಇವಳನ್ನು ನೋಡುವಾಗ, ಅಗಲಿದ ನನ್ನ ಪ್ರೇಯಸಿ ಗಂಗೆಯ ನೆನಪಾಗುತ್ತಿದೆ.

ಮಂತ್ರಿ: ಬಹುಶಃ ದೇವಿಯವರೇ ತಮ್ಮ ಬರವನ್ನು ಹಾರೈಸಿ ಈ ಕಡೆ ಬರುತ್ತಿರಬೇಕು.

ಶಂತನು: ಏನೋ, ಈ ಕ್ಷಣದಿಂದ ನನ್ನ ಚಿತ್ತವೇ ಚಾಂಚಲ್ಯಕ್ಕೊಳಗಾಗಿದೆ.

ಮಂತ್ರಿ: ಸೈರಿಸಿ ಪ್ರಭುಗಳೇ, ನಾನಾಕೆಯ ಇರವನ್ನು ಅರಿತುಬರುವೆ.

ಶಂತನು: ಹೂಂ, ಬೇಗ ಬೇಗ ನಡೆಯಿರಿ ಮಂತ್ರಿಗಳೇ.

(ಮಂತ್ರಿ ನಾವೆಯಿರುವಲ್ಲಿಗೆ ಧಾವಿಸುವನು. ಚಕ್ರವರ್ತಿ ಶಂತನು ಬೆರಗಾಗಿ ಅಲ್ಲೇ ನಿಂತಿರುವನು.) ತೆರೆ.

ದೃಶ್ಯ ಎರಡು.

(ಚಕ್ರವರ್ತಿಯು ಸಮ್ಮುಖದಲ್ಲಿ ಇಳಿವಯಸ್ಸಿನ ಬೆಸ್ತನಾದ ಸತ್ಯವ್ರತನು ಬಂದು ಶಿರಬಾಗುತ್ತಾನೆ.)

ಶಂತನು: ಏಳು, ಏಳು. ನೀನಾರು? ನಿನ್ನ ಹೆಸರೇನು?

ಸತ್ಯವ್ರತ: ಮಹಾರಾಜ! ನಾನು ಬೆಸ್ತರವನು! ನನ್ನ ಹೆಸರು ಸತ್ಯವ್ರತ ಧೊರೆಗಳೇ.

ಮಂತ್ರಿ: ನಾವು ನೋಡಿದ ಸುಂದರಿಯ ತಂದೆಯೋತ!

ಶಂತನು: ಹೌದೇ ಸತ್ಯವ್ರತ?

ಸತ್ಯ: ಹೌದು ಮಹಾರಾಜ.

ಶಂತನು: ಅವಳ ಹೆಸರೇನು? ವಿವಾಹವಾಗಿದೆಯೆ ಅವಳಿಗೆ?

ಸತ್ಯ: ಆಕೆ ಸತ್ಯವತಿ; ಅವಿವಾಹಿತಳು, ಮಹಾರಾಜ.

ಶಂತನು: (ನಗುತ್ತಾ) ಸತ್ಯವ್ರತ! ಆಕೆಯ ಮೇಲೆ ನನಗೆ ಮನಸ್ಸಾಗಿದೆ. ನೀನು ಒಪ್ಪುವುದಾದರೆ ಆಕೆಯನ್ನು ನನ್ನ ರಾಣಿಯನ್ನಾಗಿ ಮಾಡಬಲ್ಲೆ!

ಸತ್ಯ: (ಗಾಬರಿಯಿಂದ) ಮಹಾಪ್ರಭೋ!........

ಶಂತನು: ಏಕೆ ತಡಮಾಡುತ್ತಿರುವೆ? ಹೂಂ, ಬೇಗ ಉತ್ತರ ಕೊಡು.

ಸತ್ಯ: ಪ್ರಭೂ, ನಾನು ಬಡವ. ಕೀಳ ಕೀಳು ಕುಲದವನು.

ಶಂತ: ಸತ್ಯವ್ರತ! ಅವೆಲ್ಲ ನನಗೆ ಗೊತ್ತು. ಸತ್ಯವತಿಯ ಅನುಪಮ ಸೌಂದರ್ಯಕ್ಕೆ ನಾನು ಮಾರುಹೋಗಿದ್ದೇನೆ. ಅವಳಿಗಾಗಿ ಜಾತಿ-ನೀತಿ-ಧರ್ಮ ಯಾವುದನ್ನೂ ನಾನು ತ್ಯಜಿಸಬಲ್ಲೆ—ತಿಳಿಯಿತೆ?

ಸತ್ಯ: ಮಹಾರಾಜ! ತಮ್ಮಾಜ್ಞೆಯನ್ನುಧಿಕ್ಕರಿಸಲು ನಾನು ಶಕ್ತನಲ್ಲ! ಆದರೆ ಒಂದು ಮಾತು!........

ಶಂತ: ಏನದು? ಬೇಗ ಹೇಳಿಬಿಡು.

ಸತ್ಯ: ಸತ್ಯವತಿಯ ಅಭಿಪ್ರಾಯ ಏನಿದೆಯೊ?

ಶಂತ: ಒಳ್ಳೆಯದು. ಸತ್ಯವ್ರತ! ಅವಳನ್ನೂ ಕೇಳಿಬಿಡು. ಅರೆಗಳಿಗೆಯಲ್ಲಿ ಅವಳ ಅಭಿಪ್ರಾಯವನ್ನು ತಿಳಿಸು

ಸತ್ಯ: ತಮ್ಮಾಜ್ಞೆಯಂತೆ ವರ್ತಿಸುತ್ತೇನೆ-ಮಹಾಪ್ರಭೂ.

(ಸತ್ಯವ್ರತ ತೆರಳುವನು) ತೆರೆ.

ದೃಶ್ಯ ಮೂರು

[ಚಕ್ರವರ್ತಿ ಶಂತನು ಆತುರದಿಂದ ಅವನ ಬರವನ್ನು ಹಾರೈಸುತ್ತ ಕುಳಿತಿದ್ದಾನೆ. ಸತ್ಯವ್ರತನ ಪ್ರವೇಶ.]

ಸತ್ಯ: (ಕೈ ಮುಗಿಯುತ್ತ) ಮಹಾ ಪ್ರಭೂ!

ಶಂತ: ಏನು ಸತ್ಯವ್ರತ! ಸತ್ಯವತಿ ಏನೆಂದಳು? ಬೇಗ ಹೇಳು!

ಸತ್ಯ: ಅವಳದೇನೂ ಅಡ್ಡಿಯಿಲ್ಲ—ಆದರೆ?........

ಶಂತ: ಆದರೇನು? ಅವಳೇನು ಬಯಸುತ್ತಾಳೆ? ಧನವೊ? ಕನಕವೊ? ಆಭರಣಗಳನ್ನೊ?

ಸತ್ಯ: ಅಲ್ಲ ಧೊರೆಗಳೆ! ರಾಜಮಹಿಷಿಯಾದರೆ ಅವೆಲ್ಲ ಹೇಗೂ ದೊರಕುವುದಷ್ಟೆ?

ಶಂತ: ಮತ್ತೇನು?

ಸತ್ಯ: (ಅಂಜುತ್ತ) ಅವಳಲ್ಲಿ ಜನಿಸುವ ಮಕ್ಕಳಿಗೆ ರಾಜ್ಯಾಧಿಕಾರ.

ಶಂತ: ಆಗಬೇಕು, ಅಲ್ಲವೆ? ಇದು ಅವಳ ಶರ್ತವೇನೊ ಸತ್ಯವ್ರತ!

ಸತ್ಯ: ಹೌದು, ಮಹಾಪ್ರಭೊ!

ಶಂತ: (ಖಿನ್ನನಾಗಿ) ಇದನ್ನುಳಿದು ಬೇರಾವುದೂ ಪರಿಹಾರವಿಲ್ಲವೇನು ಸತ್ಯವ್ರತ!

ಸತ್ಯ: ಇಲ್ಲ ಮಹಾರಾಜ!

ಶಂತ: ಹಸ್ತಿನಾವತಿಯ ಚಕ್ರವರ್ತಿಯ ಕೇಳಿಕೆಗೂ ಇಂತಹ ಕಠಿನ ಶರ್ತವೆ? ಅಯ್ಯೋ........

ಮಂತ್ರಿ: ಸೈರಿಸಿರಿ ಪ್ರಭು! ಅಲ್ಪದ ಸಂಗದ ಪರಿಣಾಮವು ಇಷ್ಟೆ. ತಾವು ವಿವೇಕಚಿತ್ತರಾಗಬೇಕು.

ಶಂತ: ಇಲ್ಲ! ಮಂತ್ರಿಗಳೇ, ಸತ್ಯವತಿ ಇಷ್ಟು ಕಠಿಣ ಹೃದಯದವಳೆಂದು ನಾನು ಭಾವಿಸಿರಲಿಲ್ಲ.

ಮಂತ್ರಿ: ಇದಕ್ಕಾಗಿ ತಾವು ದುಃಖಿಸಿ ಪ್ರಯೋಜನವಿಲ್ಲ. ಯುವರಾಜರಾದ ದೇವದತ್ತರ ಅಧಿಕಾರವನ್ನು ತಾವು ದುರುಪಯೋಗಗೊಳಿಸಲಾಗದು.

ಶಂತ: ನಿಜ, ಮಂತ್ರಿಗಳೇ. ಅನಿರೀಕ್ಷಿತವಾಗಿ ಒದಗಿದ ಈ ಸಂಧಿಗ್ಧ ಪರಿಸ್ಥಿತಿಯಿಂದ ಪಾರಾಗುವ ಬಗೆ ಹೇಗೆ? ಅಯ್ಯೋ!

ಮಂತ್ರಿ: ಮಹಾಪ್ರಭು—ತಿಳಿದವರಾದ ತಾವೇ ಹೀಗೆ ಪ್ರಲಾಪಿಸಿದರೆ ನಾನೇನ್ನಲಿ! ಆದರೂ ಬರಿಯ ಒಂದು ಹೆಣ್ಣಿಗಾಗಿ—ಯುವರಾಜರ ಹಾಗೂ ರಾಜ್ಯದ ಹಿತವನ್ನು ಅಲಕ್ಷಿಸುವುದು ಯೋಗ್ಯವಲ್ಲ.

ಶಂತ: ಅಯ್ಯೋ! ಇತ್ತ ಸತ್ಯವತಿಯನ್ನೂ ಬಿಡಲಾರೆ; ಅತ್ತ ದೇವವ್ರತನನ್ನೂ ಕಡೆಗಣಿಸಲಾರೆ; ಮಂತ್ರಿಗಳೇ, ನಾನಿನ್ನು ಬದುಕಿ ಪ್ರಯೋಜನವಿಲ್ಲ. ಪುಣ್ಯಪ್ರದೆಯಾದ ಈ ಗಂಗಾದೇವಿಯ ಮಡಿಲೇ ನನಗಿನ್ನು ಗತಿ. ಹಾ ದೈವವೆ! (ಮೂರ್ಛೆಹೋಗುವನು). ತೆರೆ.

ದೃಶ್ಯ ನಾಲ್ಕು

[ದೇವವ್ರತ ಒಬ್ಬನೇ ಕುಳಿತು ಯೋಚಿಸುತ್ತಾನೆ.]

ದೇವವ್ರತ: (ಸ್ವಗತ) ಹಸ್ತಿನಾವತಿಯ ಸಾಮ್ರಾಟರೂ ನನ್ನ ಪರಮಪೂಜ್ಯ ತಂದೆಯವರೂ ಆದ ಶಂತನು ಮಹಾರಾಜರು ಬೇಟೆಗೆ ಹೋಗಿ ಬಂದಂದಿನಿಂದ ಇಡಿಯ ಹಸ್ತಿನಾವತಿಯಲ್ಲಿ ಒಂದು ರೀತಿಯ ಅಶಾಂತಿಯ ವಾತಾವರಣ ಹರಡಿಹೋಗಿದೆ. ಅರಮನೆಯಂತೂ ಚಿಂತಾಸಾಗರದಲ್ಲಿ ಮುಳುಗಿಹೋದಂತಿದೆ. ಯಾವಳೊ ಒಬ್ಬ ಅಂಬಿಗನ ಕನ್ಯೆಯ ರೂಪಕ್ಕೆ ಮರುಳಾಗಿ—ಮರುಳರಂತಾದ ಮಹಾರಾಜರು ರಾಜವೈಭವವೆಲ್ಲವನ್ನೂ ತೊರೆದು ವ್ಯಾಕುಲಚಿತ್ತರಾಗಿ ಪರಿತಪಿಸುತ್ತಿದ್ದಾರೆ. ಹಗಲೂ—ಇರುಳೂ ಅವಳದೇ ಧ್ಯಾನ—ಅವಳದೇ ನೆನಪು. ಪರಿಸ್ಥಿತಿ ಇದೇ ರೀತಿ ಮುಂದರಿದರೆ ಏನಾಗುವುದೋ ದೇವರೇ ಬಲ್ಲ. ಮಹಾರಾಜರ ಏಕೈಕ ಪುತ್ರನಾದ ನಾನು ನನ್ನ ಕರ್ತವ್ಯವನ್ನು ಮಾಡಲೇಬೇಕಾಗಿದೆ. ತಂದೆಯವರ ಮನಸ್ಸಿಗೆ ನೆಮ್ಮದಿಯಾಗುವಂತಹ—ರಾಜ್ಯಕ್ಕೆ ಹಿತಕಾರಿಯಾಗುವಂತಹ ಯಾವುದಾದರೊಂದು ಕಾರ್ಯವನ್ನು ಸಾಧಿಸಿ—ಈ ಸಮಸ್ಯೆಯನ್ನು—ವ್ಯಾಕುಲ ವಾತಾವರಣವನ್ನು ಪರಿಹರಿಸಬೇಕಾಗಿದೆ. ತಂದೆಗಾಗಿ ಮಗನಾದವನು ಎಂತಹ ಕಾರ್ಯವನ್ನಾದರೂ ಮಾಡಲೇಬೇಕಾಗಿದೆ. ಎಂತಲೇ ನಾನೂ ಈಗಲೇ ಕಾರ್ಯಪ್ರವೃತ್ತನಾಗುತ್ತೇನೆ. ಇನ್ನೇಕೆ ವಿಳಂಬ? ಈಗಲೇ ಹೊರಡುತ್ತೇನೆ. (ತೆರಳುವನು.) ತೆರೆ.

ದೃಶ್ಯ ಐದು

[ಸತ್ಯವ್ರತನ ಕುಟೀರ. ಸತ್ಯವತಿಯು ಎದುರಿನಲ್ಲಿ ದೇವವ್ರತ ಕಾಣಿಸಿಕೊಳ್ಳುತ್ತಾನೆ]

ದೇವವ್ರತ: (ನಮಸ್ಕರಿಸುತ್ತಾ) ನಮಸ್ಕಾರ ದೇವಿಯವರಿಗೆ.

ಸತ್ಯ: (ಗಾಬರಿಯಿಂದ) ಅಪರಿಚಿತ ಯುವಕನೇ ನೀನಾರು?

ದೇವ: ಹಸ್ತಿನಾವತಿಯ ಯುವರಾಜ ದೇವವ್ರತ ನಾನು.

ಸತ್ಯ: (ಆಶ್ಚರ್ಯದಿಂದ) ರಾಜಕುಮಾರರೇ, ತಾವೇಕೆ ಈ ಬಡ ಕುಟೀರಕ್ಕೆ ಬರಬೇಕಾಯಿತು.

ದೇವ: ಸತ್ಯವತಿದೇವಿಯವರೆಂದರೆ ತಾವೇ ಏನು?

ಸತ್ಯ: ಹೌದು; ರಾಜಕುಮಾರ?

ದೇವ: ನಿಮ್ಮನ್ನು ಕಾಣುವುದಕ್ಕಾಗಿಯೇ ಇಲ್ಲಿ ವರೆಗೆ ಬಂದುದಾಯಿತು. ದೇವಿಯವರೇ, ದಯವಿಟ್ಟು ತಾವು ಹಸ್ತಿನಾವತಿಯ ಮಹಾರಾಣಿಯಾಗಲು ಒಪ್ಪಿಕೊಳ್ಳಬೇಕು.

ಸತ್ಯ: (ನಗುತ್ತಾ) ಹೋ! ಚಕ್ರವರ್ತಿಗಳ ಆದೇಶದಂತೆ ನೀವು ಬಂದಿರುವಿರೇನೋ?

ದೇವ: ಅಲ್ಲ; ಯಾರ ಆದೇಶದಂತೆಯೂ ನಾನು ಬರಲಿಲ್ಲ. ನನ್ನ ಕರ್ತವ್ಯಪಾಲನೆಗಾಗಿ ಮಾತ್ರ ನಾನು ಬಂದಿದ್ದೇನೆ.

ಸತ್ಯ: ಅದೇನು ಹೇಳಬಹುದೆ?

ದೇವ: ನಿಮ್ಮ ಶರ್ತ?

ಸತ್ಯ: ಹೌದು! ಅದು ನಿಮಗೆ ಗೊತ್ತಿದೆ ತಾನೆ?

ದೇವ: ಅದನ್ನು ಪೂರೈಸುವುದಕ್ಕಾಗಿಯೆ ಬಂದಿದ್ದೇನೆ.

ಸತ್ಯ: (ಆಶ್ಚರ್ಯದಿಂದ) ನನ್ನಂತಹ ಒಬ್ಬ ಬಡ ಹೆಣ್ಣಿನ ಪ್ರೀತಿಗಾಗಿ ಚಕ್ರವರ್ತಿಯವರು ಇಷ್ಟು ಮುಂದರಿಯುವುದು ಒಳ್ಳೆತಲ್ಲ.

ದೇವ: ದೇವಿ ಪ್ರೀತಿಯ ಮುಂದೆ ಮೇಲು—ಕೀಳು, ಬಡವ—ಬಲ್ಲಿದ ನೆನ್ನುವ ಯಾವ ಭಾವನೆಯೂ ಉಳಿಯಲಾರದು.

ಸತ್ಯ: ಏನೋ ನಾನರಿಯೆ! ಹಸ್ತಿನಾವತಿಯ ನಿಜವಾದ ಉತ್ತರಾಧಿಕಾರಿಯಾದ ನಿಮ್ಮ ಬಗ್ಗೆ ನಾನು ದ್ರೋಹ ಮಾಡಲಾರೆ

ದೇವ: ನೀವೇನು ಮಾಡಬೇಕಿ; ನಿಮ್ಮಲ್ಲಿ ಹುಟ್ಟುವ ಮಕ್ಕಳಿಗೆ ಹಸ್ತಿನಾವತಿಯ ರಾಜ್ಯಾಧಿಕಾರವನ್ನು ಕೊಡುವ ಸಲುವಾಗಿ— ನಾನೀಗಿಂದೀಗಲೇ ನನ್ನ ಅಧಿಕಾರವನ್ನು ತ್ಯಾಗಮಾಡಿದ್ದೇನೆ.

ಸತ್ಯ: ರಾಜಕುಮಾರರೇ, ನೀನೇನು ವಿವೇಕಶೂನ್ಯರಾದಿರಿ?

ದೇವ: ಅಲ್ಲ ತಾಯಿಯೂ, ಇದು ನನ್ನ ಪ್ರತಿಜ್ಞೆ. ಸೂರ್ಯ ಚಂದ್ರರೂ ಅಷ್ಟ ದಿಕ್ಕುಗಳೂ ತಂದೆಯಾದ ಶಂತನು ಮಹಾರಾಜರೂ ತಾಯಿ ಗಂಗಾ ದೇವಿಯೂ ಇದಕ್ಕೆ ಸಾಕ್ಷಿ; ಇನ್ನೂ ನನ್ನಲ್ಲಿ ನಿಮಗೆ ಸಂದೇಹ ಉಳಿದಿದೆಯು?

ಸತ್ಯ: (ಗಂಭೀರಳಾಗಿ) ಇಲ್ಲ; ದೇವವ್ರತರೇ! ಆದರೆ ನಿಮ್ಮ ಮಕ್ಕಳಿಗೆ? ಅವರನ್ನೂ ರಾಜ್ಯದ ಸಾಮಾನ್ಯ ಪ್ರಜೆಗಳಾಗಿ ಮಾಡುತ್ತೀರಾ?

ದೇವ: ನಾನಿನ್ನೂ ಅವಿವಾಹಿತ. ಅಂತೆಯೇ ಆಜನ್ಮವೂ ಬ್ರಹ್ಮಚಾರಿಯಾಗಿಯೆ ಉಳಿಯುತ್ತೇನೆ. ಇದು ನನ್ನ ಎರಡನೆಯ ಪ್ರತಿಜ್ಞೆ.

ಸತ್ಯ: (ಬೆರಗಾಗಿ) ಹಾ! ರಾಜಕುಮಾರ! ಎಂತಹ ಘೋರ ಪ್ರತಿಜ್ಞೆ ಮಾಡಿಬಿಟ್ಟಿರಿ?

ದೇವ: ದೇವಿ! ನೀವೇನೂ ಚಿಂತಿಸುವುದವಶ್ಯವಿಲ್ಲ. ನಾನೀಗಲೇ ಹೊರಡುವೆ. ಚಕ್ರವರ್ತಿಗಳಿಗೆ ಈ ವಾರ್ತೆಯನ್ನರುಹಿ ಅವರ ಮನಸ್ಸಿಗೆ ನೆಮ್ಮದಿಯನ್ನು ನೀಡಬೇಕಾಗಿದೆ. ಬರುತ್ತೇನೆ ತಾಯಿಯೂ.

(ದೇವವ್ರತ ತೆರಳುವನು. ಸತ್ಯವತಿ ಬೆರಗುಗಣ್ಣುಗಳಿಂದ ಅವನು ಹೋಗುತ್ತಿರುವುದನ್ನೆ ನೋಡುವಳು.) ತೆರೆ.

ದೃಶ್ಯ ಆರು

[ಅರಮನೆಯ ಕೊಠಡಿ. ಚಿಂತಾಕ್ರಾಂತನಾಗಿ ನರಳುತ್ತಿರುವ ಶಂತನು ಚಕ್ರವರ್ತಿಯ ಮುಂದೆ ದೇವವ್ರತ ಕಾಲೂರಿ ಕುಳಿತುಕೊಳ್ಳುತ್ತಾನೆ.]

ದೇವ: ಅಪ್ಪಾ! ಅಪ್ಪಾ!

ಶಂತ: (ಕ್ಷೀಣಸ್ವರದಲ್ಲಿ) ಯಾರು? ದೇವವ್ರತ? ಬಾ ಮಗೂ.

ದೇವ: ಅಪ್ಪಾ! ನಿಮಗೊಂದು ಸಂತಸದ ವಾರ್ತೆ ತಂದಿದ್ದೇನೆ! ಕಣ್ತೆರೆಯಿರಿ.

ಶಂತ: ಏನು ದೇವವ್ರತ! ಬದುಕೇ ಭಾರವಾಗಿರುವ ನನಗೆ ಯಾವ ಸಂತಸದ ವಾರ್ತೆಯಿಂದೇನು ಸುಖ ದೊರಕೀತು?

ದೇವ: ಅಪ್ಪಾ, ಸತ್ಯವತಿ ದೇವಿಯುವರು ತಮ್ಮನ್ನು ವಿವಾಹವಾಗಲು ಒಪ್ಪಿರುತ್ತಾರೆ.

ಶಂತ: ಯಾರು? ಸತ್ಯವತಿ! ಅವಳ ಸುದ್ದಿಯೇ ನನಗೆ ಬೇಡ. ನಿನ್ನನ್ನು ಹಸ್ತಿನಾವತಿಯ ಗದ್ದುಗೆಯಿಂದ ದೂರವಿರಿಸಿ........ದೊರೆಯುವ ಸುಖ—ಎಷ್ಟು ಮಹತ್ತರವಾದರೂ ನನಗೆ ಬೇಡವೇ ಬೇಡ!

ದೇವ: ನೀವು ದೂರವಿರಿಸುವ ಅಗತ್ಯವಿಲ್ಲ. ನಾನೇ ದೂರ ನಿಲ್ಲುವೆ. ಹಾಗೆಂದು ಸತ್ಯವತಿ ದೇವಿಗೆ ಮಾತು ಕೊಟ್ಟಿರುವೆ! ಅಪ್ಪಾ....

ಶಂತ: ಅಯ್ಯೋ! ದೇವವ್ರತ, ನೀನೇನು ಅವಿವೇಕಿಯಾದೆಯಾ? ಇನ್ನೇನು ಮಾಡಲಿ?

ದೇವ: ಅಷ್ಟೇ ಅಲ್ಲ. ನಾನು ಆಜನ್ಮವೂ ಬ್ರಹ್ಮಚಾರಿಯಾಗಿಯೇ ಉಳಿಯುವ ಪ್ರತಿಜ್ಞೆ ಮಾಡಿದ್ದೇನೆ.

ಶಂತ: (ತಲೆ ಬಡಿದುಕೊಳ್ಳುತ್ತಾ) ಹಾ! ಮಗೂ, ಎಂತಹ ಅನರ್ಥ ಕಾರ್ಯವನ್ನು ಮಾಡಿದೆ!

ದೇವ: ಇಲ್ಲ ಅಪ್ಪಾ! ತಂದೆಗಾಗಿ ಮಗನು ಮಾಡಲೇಬೇಕಾದುದನ್ನು ಮಾಡಿದೆ ಅಪ್ಪಾ.

ಶಂತ: (ಚೇತರಿಸಿಕೊಳ್ಳುತ್ತಾ) ಮಗೂ ದೇವವ್ರತ, (ದೇವವ್ರತನ ತಲೆ ನೇವರಿಸುವನು. ಕಣ್ಣುಗಳು ನೀರು ಸುರಿಸುವವು.)

ದೇವ: ಏನು ಅಪ್ಪಾ!

ಶಂತ: (ದೈನ್ಯಪಡುತ್ತಾ ಗದ್ಗದ ದನಿಯಲ್ಲಿ) ದೇವವ್ರತ! ನೀನು ಮಗನು ಮಾತ್ರವೇ ಅಲ್ಲ, ನನ್ನ ಪಾಲಿನ ದೇವರು.

ದೇವ: ನಿಮ್ಮಿಂದ ಈ ಮಾತು ಹೇಳಿಸಿಕೊಳ್ಳಬೇಕಾದರೆ ಎಷ್ಟು ಪುಣ್ಯ ಮಾಡಬೇಕು!

ಶಂತ: ಮಗೂ! ಈಗಲೇ ನೀನು ಮಾಡಿದ ಪುಣ್ಯ ಮಹತ್ತರವಾಗಿದೆ. ನಿನಗಾಗಿ ನಾನೇನು ಮಾಡಲಿ, ದೇವವ್ರತ?

ದೇವ: ನಿಮ್ಮ ಪ್ರೀತಿ-ಚರಣಸೇವೆ ಇಷ್ಟರಿಂದಲೇ ನಾನು ತೃಪ್ತಿ ಪಡುವೆ. ನನಗಿನ್ನೇನೂ ಬೇಡ!

ಶಂತ: ದೇವವ್ರತ, ಇಂತಹ ಭೀಷ್ಮಪ್ರತಿಜ್ಞೆ ಮಾಡಿದುದಕ್ಕಾಗಿ, ಇಂದಿನಿಂದ ನೀನು ಭೀಷ್ಮನೆಂಬ ಹೆಸರಿನಿಂದಲೇ ಲೋಕದಲ್ಲಿ ಪ್ರಸಿದ್ಧನಾಗು ಮಗುವೇ!

ದೇವ: ತಮ್ಮಾಜ್ಞೆಯಂತೆ.

ಶಂತ: ಭೀಷ್ಮ! ನಿನ್ನ ತಾಯಿ ಗಂಗೆಯೇ ಉದಾರಚರಿತಳು. ಅವಳ ಉದರದಿಂದ ಜನಿಸಿದ ನಿನ್ನ ಬಾಳು ಸಾರ್ಥಕವಾಯಿತು. ನೀನು ನಿನ್ನ ಅನುಪಮ-ಅದ್ಭುತ ತ್ಯಾಗದಿಂದ ಅವಳಿಗಿಂತಲೂ ಮಿಗಿಲಾದ ಕೀರ್ತಿಶಾಲಿ ಯಾದೆ. ಮಗೂ, ನೀನು ಇಚ್ಛಾಮರಣಿಯಾಗು! ಇದು ನನ್ನ ವರ.

ದೇವ: ಧನ್ಯನಾದೆ, ಅಪ್ಪಾ!

ಶಂತ: ನೀನು ಹಸ್ತಿನಾವತಿಯ ಸಿಂಹಾಸನದಿಂದ ದೂರ ಉಳಿದರೂ, ಅದರ ಉಳಿವಿಗಾಗಿ, ಆಜೀವಪರ್ಯಂತರ ಶ್ರಮಿಸುತ್ತಿರುವುದಾಗಿ ಮಾತು ಕೊಡು, ಭೀಷ್ಮ.

ದೇವ: ಅಂತೆಯೆ ಆಗಲಿ ಅಪ್ಪಾ! ನನ್ನನ್ನು ಆಶೀರ್ವದಿಸು. (ಕಾಲಿ ಗೆರಗುವನು.)

ಶಂತ: (ಮಗನನ್ನು ಮೇಲೆತ್ತಿ ಮೈದಡವಿ) ಭೀಷ್ಮ, ನಿನ್ನನ್ನು ಮಗ ನಾಗಿ ಪಡೆದ ನನ್ನ ಬಾಳು ಸಾರ್ಥಕವಾಯಿತು. ತಂದೆಯ ಮನೋಭಿ ಲಾಷೆಗಾಗಿ, ಶ್ರೀರಾಮಚಂದ್ರನಂತೆ ನಡೆದ ನಿನ್ನ ಕೀರ್ತಿ ಉಜ್ವಲವಾಯಿತು. ನಿನ್ನನ್ನು ಪಡೆದ ಗಂಗಾದೇವಿ ಧನ್ಯಳಾದಳು. ನಿನ್ನನ್ನು ಪಡೆದ ಭಾರ ತಾಂಬೆಯೂ ಧನ್ಯಳಾದಳು. (ಆನಂದದಿಂದ ಮೈಮರೆಯುವನು. ಪುನಃ ಚೇತರಿಸಿ) ಭೀಷ್ಮ! ನಿನ್ನ ಕೀರ್ತಿ ಆಚಂದ್ರಾರ್ಕಪರ್ಯಂತ ಉಜ್ವಲವಾಗಿ ಬೆಳಗಲಿ! (ಹರಸುವನು.) ತೆರೆ.

**Edited, Printed & Published by K. V. Shenoy
at The Prabhat Printers, Ltd., Mangalore.**